

# ದೃಶ್ಯ ಕಲೆಗಳು

## ಶಿಕ್ಷಕರಿಗಾಗಿ

- ವಿದ್ಯಾರ್ಥಿಗಳಿಗೆ ಆರಾಮವಾಗಿ ಕುಳಿತುಕೊಳ್ಳಲು ಮತ್ತು ಕೆಲಸ ಮಾಡಲು ಸಾಕಷ್ಟು ಸ್ಥಳಾವಕಾಶವನ್ನು ಒದಗಿಸಿ, ಜೊತೆಗೆ ಸಾಕಷ್ಟು ಬೆಳಕು ಮತ್ತು ವಾತಾಯಾನವನ್ನು ಖಚಿತಪಡಿಸಿಕೊಳ್ಳಿ.
- ವಿದ್ಯಾರ್ಥಿಗಳ ಕೆಲಸವನ್ನು ಪ್ರದರ್ಶಿಸಲು ಮತ್ತು ಹಂಚಿಕೊಳ್ಳಲು ಪ್ರದರ್ಶನ ಫಲಕಗಳನ್ನು ಇರಿಸಿ, ಅವರನ್ನು ಪ್ರೇರೇಪಿಸಲು ನಿಯಮಿತವಾಗಿ ಬದಲಾಯಿಸಬಹುದು.
- ತಮ್ಮದೇ ಆದ ಆಲೋಚನೆಗಳು, ಕಲ್ಪನೆಗಳು, ಭಾವನೆಗಳು ಮತ್ತು ಕುತೂಹಲಗಳನ್ನು ವ್ಯಕ್ತಪಡಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ, ಮತ್ತು ಅವರ ಸ್ವಂತಿಕೆ ಮತ್ತು ಮುಗ್ಧತೆಯನ್ನು ಅವರ ಕೆಲಸದಲ್ಲಿ ಪ್ರತಿಬಿಂಬಿಸಲು ಅವಕಾಶ ನೀಡಿ.
- ತರಗತಿಯಲ್ಲಿ ತಮ್ಮ ಆಲೋಚನೆಗಳನ್ನು ಅನ್ವೇಷಿಸಲು, ಪ್ರಯೋಗಿಸಲು ಮತ್ತು ಚರ್ಚಿಸಲು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುವ ಚಟುವಟಿಕೆಗಳಿಗೆ ಆದ್ಯತೆ ನೀಡಿ.
- ಕೆಲಸದ ನಂತರ ಸ್ವಚ್ಛಗೊಳಿಸುವುದು, ಬಳಸಿದ ವಸ್ತುಗಳನ್ನು ಹಿಂದಕ್ಕೆ ಇಡುವ ಜಾಗದಲ್ಲೇ ಇಡುವುದು ಮತ್ತು ಕಲಾ ಸಾಮಗ್ರಿಗಳನ್ನು ಕಾಳಜಿ ಮತ್ತು ಗೌರವದಿಂದ ನೋಡಿಕೊಳ್ಳುವುದು ಮತ್ತು ನಿರ್ವಹಿಸುವುದು ಮುಂತಾದ ಸರಳ ಅಭ್ಯಾಸಗಳನ್ನು ಬೆಳೆಸಿಕೊಳ್ಳಿ.
- ಮನೆಯಲ್ಲಿ ತಮ್ಮ ಚಟುವಟಿಕೆಗಳನ್ನು ಚರ್ಚಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ಮತ್ತು ಕಲೆ ಮತ್ತು ಸಂಸ್ಕೃತಿಯ ಕಲಿಕೆ ಮತ್ತು ಅಭ್ಯಾಸದಲ್ಲಿ ಅವರ ಪೋಷಕರನ್ನು ತೊಡಗಿಸಿಕೊಳ್ಳಿ.



© NCERT not to be republished

# ೧ ಕಲೆಯಲ್ಲಿ ವಸ್ತುಗಳು

0337CH01

ನಾವು ನಮ್ಮ ಸುತ್ತಮುತ್ತಲೂ ವಿವಿಧ ರೀತಿಯ ವಸ್ತುಗಳನ್ನು ನೋಡುತ್ತೇವೆ. ನಾವು ಅವುಗಳನ್ನು ಪ್ರತಿದಿನ, ಅಲಂಕಾರಕ್ಕಾಗಿ, ಕೆಲಸಕ್ಕಾಗಿ, ಶಿಕ್ಷಣದಲ್ಲಿ, ಶಾಲೆ ಮತ್ತು ಮನೆಯಲ್ಲಿ ಬಳಸುತ್ತೇವೆ. ಈ ವಸ್ತುಗಳು ವಿಶಿಷ್ಟ ವಿನ್ಯಾಸಗಳನ್ನು **ಹೊಂದಿವೆ** ಮತ್ತು ವಿಭಿನ್ನ ವಸ್ತು**ಗಳಿಂದ ಮಾಡಲ್ಪಟ್ಟಿವೆ**.
















ಈ ಅಧ್ಯಾಯದ ಅಂತ್ಯದ ವೇಳೆಗೆ, ನೀವು ವಸ್ತುಗಳನ್ನು ಚಿತ್ರಿಸಲು, ಬಣ್ಣ ಹಚ್ಚಲು ಮತ್ತು ಜೇಡಿಮಣ್ಣಿನ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇದು ವಿವಿಧ ವಸ್ತುಗಳ **ಆಕಾರಗಳು, ರೂಪಗಳು, ಬಣ್ಣಗಳು** ಮತ್ತು ವಸ್ತುಗಳನ್ನು ಕಲಿಯಲು ಮತ್ತು ಪ್ರಶಂಸಿಸಲು ನಿಮಗೆ ಸಹಾಯ ಮಾಡುತ್ತವೆ.



## ಚಟುವಟಿಕೆ೧ ಸಾಲು/ರೇಖೆಗಳೊಂದಿಗೆ ಆಟವಾಡಿ

ಗೆರೆಯೆಳೆಯಿರಿ ಮತ್ತು ನಿಮ್ಮ **ಗೆರೆಗಳನ್ನು** ಅಲೆದಾಡಲು ಬಿಡಿ. ಕೆಲವು **ಗೆರೆಗಳನ್ನು ತ್ವರಿತವಾಗಿ** ಮತ್ತು ಕೆಲವನ್ನು ನಿಧಾನವಾಗಿ ಎಳೆಯಿರಿ.

- **ದಪ್ಪ ಮತ್ತು ಗಾಢವಾದ ಗೆರೆಗಳನ್ನು** ಬರೆಯಲು ಸ್ವಲ್ಪ ಒತ್ತಿ.
- **ತೆಳುವಾದ ಮತ್ತು ಹಗುರವಾದ(ಗಾಢವಲ್ಲದ) ಗೆರೆಗಳಿಗಾಗಿ** ನಿಧಾನವಾಗಿ ಎಳೆಯಿರಿ.

ಈ ಕೆಳಗಿನ ವಿಧದ ರೇಖೆಗಳನ್ನು ಬರೆಯಿರಿ—

**ಅಲೆಯ ರೇಖೆಗಳು**

**ಅಂಕುಡೊಂಕಾದ ರೇಖೆಗಳು**

**ಚುಕ್ಕೆ ರೇಖೆಗಳು**

**ಒಡೆದ ರೇಖೆಗಳು**

**ಉದ್ದ ರೇಖೆಗಳು**

**ಅಡ್ಡ ರೇಖೆಗಳು**

**ಇಳಿಜಾರು ರೇಖೆಗಳು**

**ಸುರುಳಿ ರೇಖೆಗಳು**

© NCERT not to be republished

## ಚಟುವಟಿಕೆ ೨ ನಿಮ್ಮ ಸುತ್ತಮುತ್ತಲೂ ಕಂಡುಬರುವ ವಸ್ತುಗಳನ್ನು ಚಿತ್ರಿಸಿ ಮತ್ತು ಬಣ್ಣ ಹಚ್ಚಿ

ನಿಮ್ಮ ಸುತ್ತಮುತ್ತಲಿನ ಕೆಲವು ವಸ್ತುಗಳನ್ನು ಸ್ಪರ್ಶಿಸಿ ಮತ್ತು ವೀಕ್ಷಿಸಿ. ಅವುಗಳ **ರೇಖೆಗಳು, ಆಕಾರಗಳು** ಮತ್ತು **ಬಣ್ಣಗಳನ್ನು** ಗಮನಿಸಿ.

ಬೇರೆ ಬೇರೆ ಆಕಾರಗಳಿರುವ ಯಾವುದಾದರೂ ಮೂರು ವಸ್ತುಗಳನ್ನು ಚಿತ್ರಿಸಿ ಮತ್ತುಬಣ್ಣ ಹಾಕಿರಿ.



**ಮುಂದುವರಿಸಿ: ಕಾಗದದ ತುಂಡಿನ ಮೇಲೆ, ಫಲಕದ ಮೇಲೆ ಅಥವಾ ರೇಖಾಚಿತ್ರ/ಡ್ರಾಯಿಂಗ್ ಪುಸ್ತಕದಲ್ಲಿ ಹೆಚ್ಚು ರೇಖಾಚಿತ್ರಗಳನ್ನು ಇಳಿಸಿ.**

© NCERT not to be republished

ನಿಮ್ಮ ಮನೆಯಲ್ಲಿ ಕಂಡುಬರುವ ಕೆಲವು ವಸ್ತುಗಳನ್ನು ಚಿತ್ರಿಸಿ ಮತ್ತು ಬಣ್ಣ ಮಾಡಿ.

ನಿಮ್ಮ ಮನೆಯ ಸುತ್ತಮುತ್ತಲೂ ನೋಡಿ, ವಿವಿಧ **ಆಕಾರಗಳ ಮತ್ತು ರೂಪಗಳ** ವಸ್ತುಗಳನ್ನು ಕಂಡುಹಿಡಿಯಿರಿ.

ಅವುಗಳನ್ನು ಇದಕ್ಕಾಗಿ ಬಳಸಬಹುದು:

- ಅಡುಗೆ ಮಾಡುವುದು
- ಕೆಲಸ ಮಾಡುವುದು
- ಓದುವುದು
- ಮಲಗುವುದು
- ಆಟವಾಡುವುದು

ಅವುಗಳಲ್ಲಿ ಕೆಲವುಗಳ ಚಿತ್ರ ಬಿಡಿಸಿ ಮತ್ತು ಅವುಗಳಿಗೆ ಬಣ್ಣ ಹಾಕಿ.

ನಿಮ್ಮ ರೇಖಾಚಿತ್ರಗಳನ್ನು ನಿಮ್ಮ ಸಹಪಾಠಿಗಳೊಂದಿಗೆ ಹಂಚಿಕೊಳ್ಳಿ.




© NCERT not to be republished

## ಚಟುವಟಿಕೆ ೩ ಪತ್ತೆಹಚ್ಚುವುದು, ಕತ್ತರಿಸುವುದು ಮತ್ತು ಅತಿಕ್ರಮಿಸುವುದು


ಎಲೆಗಳು, ಸಣ್ಣ ವಸ್ತುಗಳು ಮತ್ತು ಅಮೂರ್ತ ಆಕಾರಗಳಂತಹ ಯಾವುದೇ ಮೂರು ವಿಭಿನ್ನ ರೀತಿಯ ವಸ್ತುಗಳನ್ನು ಬಳಸಿಕೊಂಡು ಈ ಚಟುವಟಿಕೆಯನ್ನು ಮಾಡಬಹುದು.

### ಹಂತ ೧

ಯಾವುದಾದರೂ ಮೂರು ವಸ್ತುಗಳನ್ನು ಆಯ್ಕೆ ಮಾಡಿ ಮತ್ತು ಅವುಗಳನ್ನು ಚಿತ್ರಿಸಿ.


ವಸ್ತು ೧


ವಸ್ತು ೨


ವಸ್ತು ೩

### ಹಂತ ೨

ನಿಮ್ಮ ರೇಖಾಚಿತ್ರಗಳ ಮೇಲೆ ಟ್ರೇಸಿಂಗ್ ಪೇಪರನ್ನು ಇರಿಸಿ ಮತ್ತು ಮೂರರ ರೂಪರೇಖೆಗಳನ್ನು ಪ್ರತ್ಯೇಕವಾಗಿ ಬರೆಯಿರಿ.




**ಶಿಕ್ಷಕರಿಗೆ ಟಿಪ್ಪಣಿ**

- ಟ್ರೇಸಿಂಗ್ ತೋಳಿನ ಚಲನೆಯನ್ನು ಒಳಗೊಂಡಿರುತ್ತದೆ ಮತ್ತು ಪೆನ್ಸಿಲ್ ಹಿಡಿತವನ್ನು ಅಭಿವೃದ್ಧಿಪಡಿಸುತ್ತದೆ.
- ಅತಿಕ್ರಮಣವು ಹೊಸ ಆಕಾರಗಳು ಮತ್ತು ಬಣ್ಣಗಳನ್ನು ರಚಿಸಲು ಸಹಾಯ ಮಾಡುತ್ತದೆ.


### ಹಂತ ೩

ಎಲ್ಲಾ ಮೂರು ವಸ್ತುಗಳ ಟ್ರೇಸಿಂಗ್ ಕತ್ತರಿಸಿ.



### ಹಂತ ೪


ಡ್ರಾಯಿಂಗ್ ಪೇಪರ್‌ನಲ್ಲಿ ಮೊದಲ ಕಟೌಟಿನ ರೂಪರೇಖೆಯ ಗೆರೆ ಎಳೆಯಿರಿ.



© NCERT not to be republished


**ಹಂತ ೪**

ಎರಡನೇ ಕಟೌಟನ್ನು ಮೊದಲನೆಯದರ ಮೇಲೆ ಸ್ವಲ್ಪ ಅತಿಕ್ರಮಣಗದೊಂದಿಗೆ ಇರಿಸಿ.
ಈಗ, ಅದರ ರೂಪರೇಖೆಯನ್ನು ಬರೆಯಿರಿ.



**ಹಂತ ೬**

ಮೂರನೆಯ ಕಟೌಟನ್ನು ಅನ್ನು ಹಿಂದಿನವುಗಳ ಮೇಲೆ ಇರಿಸಿ, ಮತ್ತೆ ಸ್ವಲ್ಪ ಅತಿಕ್ರಮಣಗದೊಂದಿಗೆ, ಅದರ ರೂಪರೇಖೆಯನ್ನು ರಚಿಸಿ.
ಅಬ್ಬಾ! ನೀವು ಹೊಸ ಆಕಾರವನ್ನು ಮಾಡಿದ್ದೀರಿ!



**ಹಂತ ೭**

ನೀವು ಈಗಷ್ಟೇ ಪತ್ತೆಹಚ್ಚಿರುವ ಪ್ರತಿಯೊಂದು ಆಕಾರವನ್ನು **ಕೆಂಪು**, **ಹಳದಿ** ಮತ್ತು **ನೀಲಿ** ಎಂಬ ಮೂರು ವಿಭಿನ್ನ ಬಣ್ಣಗಳಲ್ಲಿ ಬಣ್ಣ ಮಾಡಿ.

ನೀವು ವಾಟರ್ ಬಣ್ಣಗಳನ್ನು ಬಳಸಬಹುದು.

ಅಬ್ಬಾ! ಅತಿಕ್ರಮಣ ಪ್ರದೇಶದಲ್ಲಿ ನೀವು ಮೂರು ಹೊಸ ಬಣ್ಣಗಳನ್ನು ನೋಡುತ್ತೀರಿ.



**ಹಂತ ೮**

ನಿಮ್ಮ ಕೆಲಸವನ್ನು ಪೂರ್ಣಗೊಳಿಸಿ, ಮತ್ತು ತೆರವುಗೊಳಿಸಿ.

© NCERT not to be republished

**ಚಟುವಟಿಕೆ ೪** **ಒಂದು ಬಾಟಲಿಯನ್ನು ಬಿಡಿಸಿ ಮತ್ತು ಅದರ ಆಕಾರದೊಂದಿಗೆ ಆಟವಾಡಿ**

ನಾನು ಬಾಟಲ್ ಮುಚ್ಚಳ.

ನನ್ನ ಆಕಾರ ನಿಮಗೆ ತಿಳಿದಿದೆ ಎಂದು
ನಾನು ಭಾವಿಸುತ್ತೇನೆ.

ನಾನು ನನ್ನ ಬಾಟಲಿಯನ್ನು

ಕಳೆದುಕೊಂಡಿದ್ದೇನೆ.

ನೀವು ನನಗಾಗಿ ಬಾಟಲಿಯನ್ನು
ತಯಾರಿಸಬಹುದೇ?

ನೀವು ನೋಡುವ ಬಾಟಲಿಗಳಿಗಿಂತ
ಇದನ್ನು ಭಿನ್ನವಾಗಿ ಮಾಡಿ.

ಅಥವಾ, ಯಾವುದು ನನ್ನದು ಎಂದು
ನನಗೆ ಗೊತ್ತಿಲ್ಲ!

ನೀವು ಎರಡನ್ನು ಮಾಡಿದರೆ,
ಅದು ನನ್ನ ಸ್ನೇಹಿತನಿಗೂ
ಸಂತೋಷವನ್ನು ನೀಡುತ್ತದೆ!

© NCERT not to be republished

## ಚಟುವಟಿಕೆ ೫ ಜೇಡಿಮಣ್ಣಿನೊಂದಿಗೆ ಆಟವಾಡುವುದು

ಜೇಡಿಮಣ್ಣಿನೊಂದಿಗೆ ಆಡುವುದು ಮೋಜಿನ ಸಂಗತಿಯಲ್ಲವೇ?

ಜೇಡಿಮಣ್ಣಿನಿಂದ ವಿವಿಧ **ಆಕಾರಗಳ** ಮತ್ತು **ರೂಪಗಳ** ವಸ್ತುಗಳನ್ನು ತಯಾರಿಸಬಹುದು.

ನಿಮ್ಮ ಸುತ್ತಮುತ್ತಲಿನ ಕೆಲವು ವಸ್ತುಗಳ ಮೂಲ ಆಕಾರಗಳನ್ನು ಚಿತ್ರಿಸಿ. ನೀವು ಅವುಗಳಿಗೆ ಮಾಂತ್ರಿಕ ವೈಶಿಷ್ಟ್ಯಗಳನ್ನು ಸೇರಿಸಬಹುದು ಮತ್ತು ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಬಹುದು.

ಅವುಗಳನ್ನು ಜೇಡಿಮಣ್ಣಿನಿಂದ ತಯಾರಿಸಲು ಪ್ರಾರಂಭಿಸಿ. ಕಡ್ಡಿಗಳನ್ನು ಬಳಸಿಕೊಂಡು ವಿನ್ಯಾಸಗಳು, ಮಾದರಿಗಳು, ಚುಕ್ಕೆಗಳು ಮತ್ತು ರೇಖೆಗಳನ್ನು ಸೇರಿಸಿ.



ಅವುಗಳನ್ನು ಪೂರ್ಣಗೊಳಿಸಿ ಮತ್ತು ನಿಮ್ಮ ವಸ್ತುಗಳಿಗೆ ವಿಭಿನ್ನ ಹೆಸರುಗಳನ್ನು ನೀಡಿ.

ನಿಮ್ಮ ವಸ್ತುಗಳನ್ನು ತಯಾರಿಸಿದ ನಂತರ ನಿಮ್ಮ ಕೈಗಳನ್ನು ತೊಳೆಯಲು ಮತ್ತು ನಿಮ್ಮ ಸ್ಥಳವನ್ನು ಸ್ವಚ್ಛಗೊಳಿಸಲು ಮರೆಯಬೇಡಿ!

**ನಿಮಗೆ ಗೊತ್ತೆ?**

ವಿಶೇಷವಾಗಿ ತಯಾರಿಸಿದ ಮಣ್ಣಿನ ಮಡಕೆಯನ್ನು ಭಾರತೀಯ ಸಂಗೀತದಲ್ಲಿ ಸಂಗೀತ ವಾದ್ಯವಾಗಿಯೂ ಬಳಸಲಾಗುತ್ತದೆ. ಇದನ್ನು ಘಟಮ್ ಎಂದು ಕರೆಯಲಾಗುತ್ತದೆ.

**ಮುಂದುವರಿಯಿರಿ: ಸ್ಥಳೀಯ ವಸ್ತುಸಂಗ್ರಹಾಲಯ, ಕರಕುಶಲ ಮೇಳ ಅಥವಾ ಕುಂಬಾರರ ಹತ್ತಿರ ಭೇಟಿ ನೀಡಿ. ನೀವು ವಿವಿಧ ಜೇಡಿಮಣ್ಣಿನ ವಸ್ತುಗಳನ್ನು ಕಾಣಬಹುದು. ನೀವು ನಿಜವಾಗಿಯೂ ಇಷ್ಟಪಡುವುದನ್ನು ಚಿತ್ರಿಸಿ! ಇದು ವಿನೋದಮಯವಾಗಿರುತ್ತದೆ!**



© NCERT not to be republished

## ಚಟುವಟಿಕೆ ೭ ಮಡಕೆಗಳನ್ನು ತಯಾರಿಸುವುದು

೧. ಈ ಚಿತ್ರಗಳಲ್ಲಿ ನೀವು ನೋಡುವ ವಸ್ತುಗಳು ಯಾವುವು?

______________________________

______________________________

೨. ನೀವು ನೋಡಿದ ಮಡಕೆಗಳ ವಿವಿಧ ಗಾತ್ರಗಳು ಮತ್ತು ಆಕಾರಗಳು ಯಾವುವು?

______________________________

______________________________

೩. ಪ್ರತಿಯೊಂದು ಚಿತ್ರದಲ್ಲೂ ಜನರು ಏನು ಮಾಡುತ್ತಿದ್ದಾರೆ?

______________________________

______________________________

ಮಡಕೆಯನ್ನು ಅಲಂಕರಿಸಲು ಪ್ರಯತ್ನಿಸಿ!

